ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ಇದು ಯಾವ ದೊಡ್ಡ ಪ್ರಶ್ನೆ, ಅವರು ಹೇಳಲಿ, ಬಾಲ ಕಾರ್ಮಿಕರ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇಲ್ಲವೇ? ಏನು ಹೀಗೆ ಹೇಳಿದರೆ, ನಿಮ್ಮ ಇಲಾಖೆಯನ್ನು ಮುಚ್ಚಿಬಿಟ್ಟಿದ್ದೀರಾ ಹೇಗೆ? ಎರಡು ವಾರ ಮುಂದು ಹೋಗುವುದು ಎಂದರೆ ಹೇಗೆ, ಮೂರನೇ ತಾರೀಕು ಶಾಸನಸಭೆ ಮುಕ್ತಾಯವಾಗುತ್ತದೆ.

ಅಧ್ಯಕ್ಷರು:– ಸಚಿವರು ಕಾಲಾವಕಾಶ ಕೇಳಿದ್ದಾರೆ, ಮುಂದಿನ ವಾರ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಸಚಿವರು):– ಉತ್ತರವನ್ನು ಸವಿವರವಾಗಿ ಮುಂದಿನ ವಾರ ಕೊಡುತ್ತೇನೆ.

ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳ ಬಗ್ಗೆ

204 (1265) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) :– ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2005–06, 2006–07ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ;

(ಆ) ಹುಬ್ಬಳ್ಳಿ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳು ಇವೆಯೇ;

(ಇ) ಹುಬ್ಬಳ್ಳಿಯ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಇರುವ ಆಡಳಿತಾತ್ಮಕ ತೊಂದರೆಗಳೇನು;

(ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

(ಅ) ಪ್ರಾರಂಭಿಸಿಲ್ಲ.

(ಆ) ಇಲ್ಲ

(ಇ) ತೊಂದರೆಗಳಿಲ್ಲ

(ಈ) ಕೋರಿಕೆಗಳು ಸ್ವೀಕರಿಸಲ್ಪಟ್ಟಾಗ ಆಯವ್ಯಯದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಪರಿಶೀಲಿಸಲ್ಪಡುತ್ತದೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ:– ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಕೊಟ್ಟಿದ್ದಾರೆ. 2005–06, 2006–07ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂಬ ಪ್ರಶ್ನೆಗೆ ಪ್ರಾರಂಭಿಸಿಲ್ಲ ಎಂದು ಉತ್ತರ ನೀಡಿದ್ದಾರೆ. ಅದೇ ರೀತಿ ಹುಬ್ಬಳ್ಳಿ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳು ಇವೆಯೇ ಎಂಬ ಬಗ್ಗೆ ಇಲ್ಲ ಎಂದು ಉತ್ತರ ನೀಡಿದ್ದಾರೆ. ಮೂರನೆಯದಾಗಿ ಹುಬ್ಬಳ್ಳಿಯ ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಇರುವ ಆಡಳಿತಾತ್ಮಕ ತೊಂದರೆಗಳೇನು ಎಂಬ ಪ್ರಶ್ನೆಗೆ ತೊಂದರೆಗಳಿಲ್ಲ ಎಂದು ಉತ್ತರ ನೀಡಿದ್ದಾರೆ. ಕೊನೆಯದಾಗಿ ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದೇ ಎಂಬ ಪ್ರಶ್ನೆಗೆ ಕೋರಿಕೆಗಳು ಸ್ವೀಕರಿಸಲ್ಪಟ್ಟಾಗ ಆಯವ್ಯಯದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಪರಿಶೀಲಿಸಲ್ಪಡುತ್ತದೆ ಎಂದು ಉತ್ತರ ನೀಡಿದ್ದಾರೆ. ಅಧ್ಯಕ್ಷರೇ ತಮ್ಮ ಮುಖಾಂತರ ನಾನು ಕೇಳುತ್ತಿದ್ದೇನೆ. ಇವತ್ತು ಗ್ರಾಮೀಣ ಭಾಗದಲ್ಲಿರುವಂತಹ ರೈತರು, ರೈತರ ಮಕ್ಕಳು ಸಂಕಷ್ಟದಲ್ಲಿರುವಂತಹ ಸಂದರ್ಭದಲ್ಲಿ 20 ರಿಂದ 30 ಕಿ.ಮೀ, 30 ರಿಂದ 40 ಕಿ.ಮೀ ವರೆಗೆ ಬಸ್ಸಿಗೆ 18 ರೂಪಾಯಿ, 20 ರೂಪಾಯಿ ದರವನ್ನು ಕೊಟ್ಟು ದೊಡ್ಡ ಮಹಾನಗರಕ್ಕೆ ಹೋಗಬೇಕಾಗುತ್ತದೆ. ಹುಬ್ಬಳ್ಳಿಗೆ ಹೋಗಬೇಕು, ಇಲ್ಲವೇ ಧಾರವಾಡಕ್ಕೆ ಹೋಗಬೇಕು. ಅಂದರೆ ಇವರು ಹೋಗುತ್ತಾ ಬರುತ್ತಾ ಬಸ್ಸಿನ ದರವನ್ನು ಹಿಡಿದರೆ 30 ರೂಪಾಯಿ ಮಿನಿಮಮ್ ಆಗುತ್ತದೆ. ಅದಕ್ಕೆ ದಯಮಾಡಿ ಈ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತಿದ್ದೇನೆ, ಗ್ರಾಮೀಣ ಭಾಗದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ದೊಡ್ಡ ಗ್ರಾಮ ಯಾವುದು ಇದೆ, ಆ ಭಾಗದಲ್ಲಿ ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತಾರಾ ಎಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಕಾರ ಹುಬ್ಬಳ್ಳಿ ಗ್ರಾಮಾಂತರದಲ್ಲಿ ನಮಗೆ ITI ತೆಗೆಯಲಿಕ್ಕೆ ಬೇಡಿಕೆ ಏನೂ ಬಂದಿಲ್ಲ. ಈಗಾಗಲೇ ಧಾರವಾಡ ಜಿಲ್ಲೆಯಲ್ಲಿ ಸುಮಾರು 38 ITI Collegeಗಳು ಕೆಲಸವನ್ನು ನಿರ್ವಹಿಸುತ್ತಿದೆ. ಅಲ್ಲಿ 3 ಸರ್ಕಾರಿ ITI Collegeಗಳು ಇದ್ದಾವೆ. ಇನ್ನು Aided Collegeಗಳು11 ಇದ್ದಾವೆ. ಇನ್ನು ಉಳಿಕೆಯದು ಆ ಧಾರವಾಡ

ಜಿಲ್ಲೆಯಲ್ಲಿ 24 ಖಾಸಗಿ ಕಾಲೇಜುಗಳು ಕೆಲಸ ನಿರ್ವಹಿಸುತ್ತಿವೆ. ಅಲ್ಲಿರತಕ್ಕಂಥ ಗ್ರಾಮೀಣ ಪ್ರದೇಶದಲ್ಲಿ ಬಡ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ಅನುಗುಣವಾಗಿ ಈ ಸರ್ಕಾರ 38 ITI collegeಗಳನ್ನು ಆ ಒಂದು ಜಿಲ್ಲೆಯಲ್ಲಿ ನಡೆಸುತ್ತಿದೆ. ಗ್ರಾಮೀಣ ಪ್ರದೇಶದಿಂದ ಯಾವುದೇ ತರಹದ ಬೇಡಿಕೆ ಬಂದಿಲ್ಲ. ಬಂದರೆ ಸರ್ಕಾರ ಮಾಡುತ್ತದೆ ಎಂದು ಹೇಳಿದ್ದೇವೆ. ಆ ಬೇಡಿಕೆ ಬಂದಾಗ, ನಮ್ಮ ಮುಂದಿನ ಬಜೆಟ್‌ನ ಲಭ್ಯತೆ ನೋಡಿಕೊಂಡು ಮಾಡಲಿಕ್ಕೆ ಮುಂದಾಗುತ್ತೇವೆ.

ಅಧ್ಯಕ್ಷರು:– ಬೇಡಿಕೆಗಳು ಬಂದಿಲ್ಲವೆಂದು ಹೇಳುತ್ತಿದ್ದಾರಲ್ಲ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ:– ದಯವಿಟ್ಟು ನಮಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ಅವರು ಈಗ ಬೇಡಿಕೆನೇ ಬಂದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ:– ಮಾನ್ಯ ಅಧ್ಯಕ್ಷರೇ, ಈಗ ಅವರು 30–35 ಕೈಗಾರಿಕಾ ಕೇಂದ್ರಗಳನ್ನು ಧಾರವಾಡ ಜಿಲ್ಲೆಯಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅವು ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಮಾತ್ರ ಸಂಬಂಧ ಇದ್ದಾವೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಎಂದರೆ 50 ಕಿ.ಮೀ. 40 ಕಿ.ಮೀ ಇವತ್ತು ಗ್ರಾಮೀಣ ಭಾಗದ ಜನರು ಹೋಗಬೇಕು. ಬಡ ಕುಟುಂಬದಿಂದ ಬಂದಂತಹ ವಿದ್ಯಾರ್ಥಿಗಳು ಇದನ್ನು ಅವಲಂಬನೆ ಮಾಡುತ್ತಿದ್ದಾರೆ. ಅಂದರೆ ಅವರ ಪರಿಸ್ಥಿತಿ ಏನು ಎಂಬುದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ತಾವು ಮನಸ್ಸು ಮಾಡಿ. ಬರೇ ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಗೆ ಮಾತ್ರ ಇದು ಸಮ್ಮತ ಇತ್ತೇನೋ? ಏಕೆಂದರೆ ಇವತ್ತು ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕೇಂದ್ರಗಳು ಸಾಕಷ್ಟು ಬರುತ್ತಿವೆ. ಅಂತಹ ಒಂದು ಸಂದರ್ಭದೊಳಗೆ ತಾವು ಕಲಘಟಗಿ ತಾಲ್ಲೂಕು, ಹುಬ್ಬಳ್ಳಿ ತಾಲ್ಲೂಕು ನವಲಗುಂದ ತಾಲ್ಲೂಕು, ಕುಂದಗೋಳ್ ತಾಲ್ಲೂಕ್ ಹೀಗೆ ಗ್ರಾಮೀಣ ಮಟ್ಟದ ತಾಲ್ಲೂಕುಗಳಲ್ಲಿ ಕೊಡುವ ಬಗ್ಗೆ ತಾವು ಮನಸ್ಸು ಮಾಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಇಕ್ಬಾಲ್ ಅನ್ಸಾರಿ:– ಮಾನ್ಯ ಸದಸ್ಯರು ಯಾವ ಗ್ರಾಮೀಣ ಪ್ರದೇಶಕ್ಕೆ ಕೇಳುತ್ತಿದ್ದಾರೆಂದು ಗೊತ್ತಾಗುತ್ತಿಲ್ಲ. ಈಗ ಹುಬ್ಬಳ್ಳಿ ತಾಲ್ಲೂಕಿನ ಗ್ರಾಮೀಣ ಪ್ರದೇಶ ಎನ್ನುತ್ತಾರೆ. ಈಗ ಹುಬ್ಬಳ್ಳಿ ತಾಲ್ಲೂಕಿನಲ್ಲಿ 10–15 ಗ್ರಾಮೀಣ ಪ್ರದೇಶಗಳಿರುತ್ತವೆ. ಪ್ರತ್ಯೇಕವಾಗಿ ಇಂತಹ

ಕಡೆ ಬೇಕು ಎಂದು ಅವರು ಹೇಳುತ್ತಿಲ್ಲ. ಯಾವುದಾದರೂ ಒಟ್ಟು ಗ್ರಾಮೀಣ ಪ್ರದೇಶದಲ್ಲಿ ಮಾಡಿ ಎಂದು ಹೇಳುತ್ತಿದ್ದಾರೆ. ಎರಡನೆಯದು ನಾನು ಎನು ಹೇಳಿದ್ದೇನೆಂದರೆ ಆಯವ್ಯಯದಲ್ಲಿ ಎಷ್ಟು ನಮೂದಿಸಲಾಗುತ್ತದೆ ಮತ್ತು ಆಮೇಲೆ ಡಾ॥ ನಂಜುಂಡಪ್ಪನವರ ವರದಿ ಪ್ರಕಾರ Industrial Area ಎಲ್ಲೆಲ್ಲಿ ಇದ್ದಾವೆ ಅದನ್ನು ನೋಡಿಕೊಂಡು ನಾವು ಕೊಡುತ್ತೇವೆ. ಈಗ 38 ಧಾರವಾಡ ಜಿಲ್ಲೆಯಲ್ಲಿ ಇದ್ದಾವೆ. ಅದರಲ್ಲಿ 20 ನಮ್ಮ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಇದ್ದಾವೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತಿದ್ದೇನೆ. ಅಂತಹ ಬಹಳ ಜರೂರು, ಗಾಂಭೀರ್ಯತೆ ಎಲ್ಲಿ ಇದೆ? ಬಡ ಮಕ್ಕಳು ಹೋಗಲಿಕ್ಕೆ ತೊಂದರೆ ಆಗುತ್ತದೆ? ಅದನ್ನು ನೀವು ನಮ್ಮ ಗಮನಕ್ಕೆ ತೆಗೆದುಕೊಂಡು ಬನ್ನಿ. Additional budgetನಲ್ಲಿ ನೋಡಿಕೊಂಡು ಮಾನ್ಯ ಹಣಕಾಸು ಸಚಿವರ ಹತ್ತಿರ ಮಾತನಾಡಿ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು:– ಮಾನ್ಯ ಪಿ.ಸಿ.ಮೋಹನ್.

(ಮಾನ್ಯ ಸದಸ್ಯರ ಗೈರು ಹಾಜರಿ)

ಅಧ್ಯಕ್ಷರು:– ಮಾನ್ಯ ಶ್ರೀನಿವಾಸಗೌಡರ ಪ್ರಶ್ನೆ ವರ್ಗಾವಣೆ ಆಗಿದೆ.

207 (1409) ಶ್ರೀ ಪಾಟೀಲ್ ಡಿ.ಆರ್ :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ಮಂಜೂರು ಮಾಡಲಾಗಿರುವ ಅನುದಾನ ಎಷ್ಟು ಹಾಗೂ ಸೌಲಭ್ಯಗಳಾವುವು;

(ಮಹಾವಿದ್ಯಾಲಯವಾರು ವಿವರ ನೀಡುವುದು);

(ಆ) ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಬೋಧಕ ಸಿಬ್ಬಂದಿ ಎಷ್ಟು ಇರಬೇಕಾಗಿದ್ದಿತು ಎಷ್ಟು ಇದೆ (ವಿದ್ಯಾಲಯವಾರು ವಿವರ ನೀಡುವುದು);

(ಇ) ಬೋಧಕರ ಕೊರತೆಯನ್ನು ತುಂಬಲು ಸರ್ಕಾರರ ಕೈಗೊಳ್ಳಲಿರುವ ಕ್ರಮವೇನು;

(ಈ) ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿರುವ ಎಂ.ಜಿ.ಜಿ.ಎನ್ ಹಾಗೂ ಸ್ನಾತಕ್ಕೋತ್ತರ ಪ್ರವೇಶಾವಕಾಶ? ಎಷ್ಟು (ಮಹಾವಿದ್ಯಾಲಯವಾರು ವಿವರ ನೀಡುವುದು)